1542eeಪ್ರ-72 (102) 4RR

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಟಿ ರವಿ ಹಾಗೂ ಡಾ|| ಧನಂಜಯ ಸರ್ಜಿ ಇವರುಗಳು ಪ್ರಸ್ತಾಪಿಸಿರುವ ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ**

**ಪ್ರಶ್ನೆ:**

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಮೊಟ್ಟೆ ವಿತರಣೆ ಮಾಡಲು ಸರ್ಕಾರದಿಂದ ಮೊಟ್ಟೆ ಖರೀದಿ, ಸಾಗಾಣಿಕೆ ವೆಚ್ಚ, ಮೊಟ್ಟೆ ಬೇಯಿಸಲು ಇಂಧನ ವೆಚ್ಚ ಹಾಗೂ ಸಿಪ್ಪೆ ಸುಲಿಯುವ ಕೂಲಿ ವೆಚ್ಚ ಸೇರಿದಂತೆ ಒಟ್ಟು ಒಂದು ಮೊಟ್ಟೆಗೆ 6 ರೂ ನೀಡಲಾಗುತ್ತಿದೆ. ಆದರೆ, ಮಾರುಕಟ್ಟೆಯಲ್ಲಿ ಮೊಟ್ಟೆಯ ಬೆಲೆ 6 ರೂ ಗಿಂತ ಹೆಚ್ಚಾಗಿರುವುದರಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಶಿಕ್ಷಕರಿಗೆ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಮಾನ್ಯ ಶಾಲಾ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಪ್ರತಿ ವಿದ್ಯಾರ್ಥಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆಗೆ ರೂ.6/-ಗಳ ಒಂದು ದಿನದ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ. ಸದರಿ ಘಟಕ ವೆಚ್ಚದಲ್ಲಿ ಮೊಟ್ಟೆ ಖರೀದಿ ಮತ್ತು ಇತರ ವೆಚ್ಚಗಳಿಗೆ ಹಂಚಿಕೆ ಮಾಡಲಾದ ಮೊತ್ತದ ವಿವರ ಕೆಳಕಂಡಂತಿದೆ:

| ವೆಚ್ಚ ವಿವರ | ನಿಗದಿಪಡಿಸಲಾದ ಮೊತ್ತ ರೂಪಾಯಿಗಳಲ್ಲಿ |
|---|---|
| ಮೊಟ್ಟೆ ಖರೀದಿಗೆ | ರೂ.5/- |
| ಮೊಟ್ಟೆ ಬೇಯಿಸಲು ಇಂಧನ ವೆಚ್ಚ | ರೂ.0.50/- |
| ಬೇಯಿಸಿದ ಮೊಟ್ಟೆಯ ಸಿಪ್ಪೆಯನ್ನು ಸುಳಿಯಲು ನಿಗದಿಪಡಿಸಿದ ಮೊತ್ತ | ರೂ.0.30/- |
| ಸಾರಿಗೆ ವೆಚ್ಚ | ರೂ.0.20/- |

ಶಾಲೆಗಳಲ್ಲಿ ಬಿಸಿಯೂಟ ಸಿದ್ಧಪಡಿಸಲು ಮತ್ತು ಪೂರಕ ಪೌಷ್ಠಿಕ ಆಹಾರ ವಿತರಿಸಲು ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಅಡುಗೆ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಮಾತ್ರ ಮುಖ್ಯಶಿಕ್ಷಕರು/ ಶಿಕ್ಷಕರು ನೋಡಿಕೊಳ್ಳುತ್ತಾರೆ.

ಮೊಟ್ಟೆಯ ದರ ಮಾರುಕಟ್ಟೆಗಳಲ್ಲಿ ಏಕರೂಪವಾಗಿ ನಿಗದಿಯಾಗಿರುವುದಿಲ್ಲ. ಸ್ಥಳೀಯವಾಗಿ ಮೊಟ್ಟೆಯ ಲಭ್ಯತೆಯ ಆಧಾರದಲ್ಲಿ ಮೊಟ್ಟೆಯ ದರದಲ್ಲಿ ಏರಿಳಿಕೆಯಾಗುತ್ತದೆ. ಆದಕಾರಣ ರಾಜ್ಯ ಸರ್ಕಾರದಿಂದ ಪೂರಕ ಪೌಷ್ಠಿಕ ಆಹಾರಗಳಾದ ಮೊಟ್ಟೆ/ಚಿಕ್ಕಿ/ಬಾಳೆಹಣ್ಣು ವಿತರಿಸಲು ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.6/-ಗಳ ಘಟಕ ವೆಚ್ಚವನ್ನು ಮೇಲಿನಂತೆ ನಿಗದಿಪಡಿಸಿರುವುದು ಸೂಕ್ತವಾಗಿರುತ್ತದೆ.

ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ, ಪೋಷಕರು ಒಳಗೊಂಡು ರಚಿತವಾಗಿರುವ ಖರೀದಿ ಸಮಿತಿಯು ಶಾಲಾ ಮಕ್ಕಳಿಗೆ ವಿತರಿಸಬೇಕಾಗಿರುವ ಮೊಟ್ಟೆಗಳನ್ನು ಖರೀದಿಸುತ್ತದೆ. ಇಲಾಖೆಯು ನಿಗದಿಪಡಿಸಿದ ದರದ ಮಿತಿಯಲ್ಲಿಯೇ (ಒಬ್ಬ ವಿದ್ಯಾರ್ಥಿಗೆ ಒಂದು ದಿನಕ್ಕೆ ಘಟಕ ವೆಚ್ಚ ರೂ. 06/-) ಖರೀದಿ ಮಾಡಿ ಸುರಕ್ಷಿತವಾಗಿ ಸಂಗ್ರಹಿಸಿ ಶಾಲಾ ಮಕ್ಕಳಿಗೆ ವಿತರಿಸುವ ವ್ಯವಸ್ಥೆ ಮಾಡಲಾಗಿದೆ.

ಪೂರಕ ಪೌಷ್ಠಿಕ ಆಹಾರ ಪದಾರ್ಥಗಳನ್ನು ಖರೀದಿಸುವಾಗ ಇಂಥವರಿಂದಲೇ ಖರೀದಿಸಬೇಕೆಂಬ ನಿಯಮಗಳಿಲ್ಲ. ಶಾಲಾ ಖರೀದಿ ಸಮಿತಿಯು ಈ ಸಂಬಂಧ ಇಲಾಖೆಯು ನೀಡಿದ ಮಾರ್ಗಸೂಚಿಯಂತೆ (SOP) ಕ್ರಮಕೈಗೊಂಡು ಮಾರುಕಟ್ಟೆಯಲ್ಲಿ, ರೈತರಿಂದ, ಸಗಟು ಮಾರಾಟಗಾರರಿಂದ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆಗಳ ಘಟಕಗಳಿಂದ ಖರೀದಿಸಲು ಅವಕಾಶವಿದೆ.

ಪೂರಕ ಪೌಷ್ಠಿಕ ಆಹಾರ ವಿತರಣೆಗೆ ಪ್ರತಿ ವಿದ್ಯಾರ್ಥಿಗೆ ನಿಗದಿಪಡಿಸಿರುವ ಘಟಕ ವೆಚ್ಚದಲ್ಲಿಯೇ ಶಾಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರ ಪದಾರ್ಥಗಳನ್ನು ಖರೀದಿಸಲಾಗುತ್ತಿರುವುದರಿಂದ ಶಿಕ್ಷಕರಿಗೆ ಹೊರೆ ಉಂಟಾಗಿರುವುದಿಲ್ಲ. ಮೊಟ್ಟೆ ದರ ಹೆಚ್ಚಿಸುವ ಬಗ್ಗೆ ಯಾವುದೇ ಬೇಡಿಕೆಗಳು ಜಿಲ್ಲೆಗಳಿಂದ ಬಂದಿರುವುದಿಲ್ಲ.

**ಇಪಿ 116 ಎಂಎಂಎಸ್ 2024**

(ಎಸ್.ಮಧುಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು**